ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ

ಕಲೆ: ಮನೋಹರ ಕೆ. ಆಚಾರ್ಯ



## ಸೈಕಲ್ ಸವಾರಿಯಲ್ಲಿ ಕಂಡ ಬದುಕಿನ ಚಿತ್ರಶಾಲೆ

ಡೊನೇಶನ್ ಕಾರ್ಡ್‌ಗಳಿಂದ 30,000 ರೂಪಾಯಿ ಜಮೆ ಆಗಿತ್ತು. ಆದರೆ ಸೈಕಲ್‌ನ ವಿಶೇಷ ಭಾಗಗಳಿಂದಾಗಿ, ಅದರ ಬೆಲೆ ಅವರು ಅಂದಾಜು ಮಾಡಿದ್ದ 20,000 ರೂಪಾಯಿಗೆ ಬದಲು ಸುಮಾರು 23,000ದಷ್ಟು ಆಗಿತ್ತು. ಉಳಿದ 7000 ರೂಪಾಯಿ ಅವರ ಸೈಕಲ್ ಯಾತ್ರೆಯ 4050 ದಿನಗಳ ಹಾದಿಯ ಖರ್ಚಿಗೆ ಸಾಕಾಗುತ್ತಿರಲಿಲ್ಲ. ಮನೆಯ ಆರ್ಥಿಕ ಪರಿಸ್ಥಿತಿಯಿಂದಾಗಿ ಮನೆಯವರಲ್ಲಿ ಕೇಳುವಂತಿರಲಿಲ್ಲ.

ಮತ್ತಷ್ಟು ಹಣ ಸಂಗ್ರಹಿಸಲು ಯೋಜಿಸಿದರು. ನವರಾತ್ರಿಯ ದಿನಗಳು ಆಗಮಿಸಿದ್ದವು. ನವರಾತ್ರಿ ಮಹೋತ್ಸವದ ದಿನ ತಮ್ಮ ಯಾತ್ರೆಗೆ ಸಹಾಯ ನೀಡುವಂತೆ ಜನರಲ್ಲಿ ಪ್ರಾರ್ಥನೆ ಮಾಡಿದರು. ಮತ್ತೆ ನಾಲ್ಕೈದು ಸಾವಿರ ರೂಪಾಯಿ ಸೇರಿತು. ಆ ದಿನಗಳಲ್ಲಿ ಪ್ರಫುಲ್ಲ ಮನೋಹರ್‌ಭಾಯಿ ಪಟೇಲ್ ಅವರು ಗೋಂದಿಯಾ ತಾಲೂಕಿನಲ್ಲಿ ಯುವ ನೇತಾರರಾಗಿ ಮೇಲೇರುತ್ತಿದ್ದರು. (ಕೆಲವೇ ವರ್ಷಗಳಲ್ಲಿ ಅವರು ಲೋಕಸಭೆಗೆ ಚುನಾಯಿತರಾಗಲಿದ್ದರು. ಮುಂದೆ ಅವರು ನಾಗರಿಕ ಉಡ್ಡಯನ ಮಂತ್ರಿಯೂ ಆಗಲಿದ್ದರು, ಕ್ಯಾಬಿನೆಟ್ ಮಂತ್ರಿ ಪದವಿಗೂ ಏರಲಿದ್ದರು). ಅವರನ್ನು ಭೆಟ್ಟಿಯಾಗಿ ಅರ್ಧ ಗಂಟೆ ಕಾಲ ತಮ್ಮ ಯೋಜನೆಯನ್ನು ತಿಳಿಸಿ ವಿವರಿಸಿದರು. ಯುವಕರ ಸಾಹಸ ಯಾತ್ರೆಗೆ ಅವರಿಂದ 5000 ರೂಪಾಯಿಯ ನೆರವು ದೊರೆಯಿತು. ಅವರನ್ನೇ ತಮ್ಮ ಯಾತ್ರೆಯ ಉದ್ಘಾಟನೆಗೆ ಆಹ್ವಾನಿಸಿದರು. ಅವರಿಂದ ಹೆಚ್ಚಿನ ಸಹಾಯವೂ ಒದಗಿ ಬಂದಿತು. ಅವರು ಭಾರತ ಮತ್ತು ನೇಪಾಳದಲ್ಲಿದ್ದ ತಮ್ಮ ಸಿ.ಜೆ. ಪಟೇಲ್ ಕಂಪನಿಗಳ ಶಾಖೆಗಳೊಡನೆ ಭಾವೇಶ್ ಅವರನ್ನು ಜೋಡಿಸಿದರು. ಅಷ್ಟೇ ಅಲ್ಲದೆ ಸೈಕಲ್ ಯಾತ್ರೆಯ ಮಾರ್ಗದಲ್ಲಿ ಬರುವ ಸಾಗರ್, ದಿಲ್ಲಿ, ಲಖನೌ ಮುಂತಾದ ತಾಣಗಳಲ್ಲಿ ಇದ್ದ ತಮ್ಮ ಶಾಖೆಗಳ ಮ್ಯಾನೇಜರ್‌ಗಳಿಗೆ ಪತ್ರ ಬರೆದು, ಈ ಯುವಕರಿಗೆ ಹಾದಿಯಲ್ಲಿ ಯಾವುದೇ ಕಷ್ಟ ಒದಗಿದರೂ, ಸೂಕ್ತ ಸಹಾಯ ನೀಡುವಂತೆ ನಿರ್ದೇಶಿಸಿದರು.

ಲಯನ್ಸ್ ಕ್ಲಬ್‌ನ ವಿನೋದ್ ಜೈನ್ ಅವರು ಕೂಡಾ, ಮಾರ್ಗದಲ್ಲಿ ಎಲ್ಲೆಲ್ಲಿ ಲಯನ್ಸ್ ಕ್ಲಬ್ ಇದೆಯೋ ಅಲ್ಲಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಹೆಸರು ಮತ್ತು ವಿಳಾಸ ನೀಡಿದರು. ಭಾವೇಶ್ ತನ್ನ ಮಿತ್ರರೊಡನೆ ನಾಗಪುರದ ಪೊಲೀಸ್ ಕಮೀಷನರ್ ಅವರನ್ನೂ ಹೋಗಿ ಭೇಟಿ ಮಾಡಿದರು. ಅವರು ಈ ಯುವಕರಿಗೆ ಪರಿಚಯದ ಪತ್ರ ಹಾಗೂ ಶಿಫಾರಸ್ಸು ಪತ್ರ ಬರೆದು ಕೊಟ್ಟರು.

ಈ ಎಲ್ಲ ಅನುಭವಗಳು ಭಾವೇಶ್ ಅವರಿಗೆ ಹುಮ್ಮಸ್ಸು ನೀಡಿದ್ದವು. ಒಂದು ಕನಸು ಕಂಡಿದ್ದರು. ಅದನ್ನು ಕಾರ್ಯಗತಗೊಳಿಸಲು ನಿಖರವಾದ ಯೋಜನೆ ರೂಪಿಸುವುದನ್ನು ಕಲಿತಿದ್ದರು. ತಮ್ಮ ಕನಸನ್ನು ಇತರರಿಗೆ ತಿಳಿಸುವ ಸಂಪರ್ಕ ಕೌಶಲವನ್ನು ಬೆಳೆಸಿಕೊಂಡಿದ್ದರು. ಅಂತಹ ಬೃಹತ್ ಯೋಜನೆಗೆ ಹಣಸಂಗ್ರಹ ಮಾಡಿದ್ದರು. 'ಪ್ರಾಜೆಕ್ಟ್ ಪ್ಲಾನಿಂಗ್' ಪ್ರಾಯೋಗಿಕವಾಗಿ ಕಲಿತಿದ್ದರು. ಈ ಸಮಯದಲ್ಲಿ ಅವರಿಗೆ ತಮ್ಮ ಕುರುಡುತನ ನೆನಪಿನಲ್ಲೇ ಇರಲಿಲ್ಲ. ಅದು ಅವರ ಹಾದಿಯ ಅಡ್ಡಿಯೂ ಆಗಿರಲಿಲ್ಲ. ಒಂದು ಬಗೆಯಲ್ಲಿ ಅಂಧನೊಬ್ಬ ಇಂತಹ ಸಾಹಸಯಾತ್ರೆಗೆ ಹೊರಟದ್ದು ಅವರ ಪ್ರವಾಸಕ್ಕೆ ಅಧಿಕ ಮೆರುಗು ನೀಡಿತ್ತು. ಜನರ ಕುತೂಹಲ ಕೆರಳಿಸಿತ್ತು.

ಇಷ್ಟು ಹೊತ್ತಿಗೆ ಅವರ ಸೈಕಲ್‌ಗಳು ತಯಾರಾಗಿದ್ದವು. ಬೇಕಿರುವ ಪತ್ರಗಳು, ದಾಖಲೆಗಳು, ಔಷಧಿಗಳ ಪೆಟ್ಟಿಗೆ, ತೊಡುವ ಉಡುಪುಗಳು, ಎರಡು ಅರ್ಧ ಪ್ಯಾಂಟ್‌ಗಳು, ಮೂರು ಟಿ–ಶರ್ಟ್‌ಗಳು, ಹೊದಿಕೆ ಇತ್ಯಾದಿ ಸಿದ್ಧವಾದವು. ಇವೆಲ್ಲವನ್ನು ಇಡಲು ವ್ಯವಸ್ಥೆ ಮಾಡಬೇಕಿತ್ತು. ಪುರುಷೋತ್ತಮನ ಸೈಕಲ್ ಕ್ಯಾರಿಯರ್‌ನಲ್ಲಿ ಒಂದು ಬ್ಯಾಗ್ ಇಡಬಹುದಿತ್ತು. ಅದರಲ್ಲಿ ತಿನಿಸುಗಳು, ಸೈಕಲ್‌ಗೆ ಗಾಳಿ ತುಂಬಲು ಬೇಕಾದ ಸಣ್ಣ ಪಂಪ್ ಮತ್ತು ಪಂಚರ್ ಆದರೆ ಬೇಕಾದ ಕೆಲವು ಸಾಮಾನುಗಳನ್ನು ಇಟ್ಟರು. ಇನ್ನೊಂದು ಸೈಕಲ್‌ನ ಹಿಂಬದಿಯಲ್ಲಿ ಭಾವೇಶ್